ಸೆಲೆಬ್ರಿಟಿ

■ ಹನಿ

## ಸ್ಥಿರತೆ ತಂದ ರಘುರಾಮ

ಭಾರತದ ರೂಪಾಯಿ ಮತ್ತೆ ತಲೆ ಎತ್ತಿ ನಿಂತಿದೆ. ವಾರದ ಹಿಂದೆ ಏಷ್ಯಾದ ಕರೆನ್ಸಿಗಳಲ್ಲೇ ಅತ್ಯಂತ ಕೆಟ್ಟ ಸ್ಥಿತಿಯಲ್ಲಿದ್ದ ರೂಪಾಯಿ, ಏಳು ದಿನಗಳ ಬಳಿಕ ಇಡೀ ವಾರ ವಿಶ್ವದ ಅತ್ಯಂತ ಸುಸ್ಥಿರ ಕರೆನ್ಸಿಯಾಗಿ ವಹಿವಾಟು ನಡೆಸುವುದರ ಮಧ್ಯೆ ಭಾರತೀಯ ರಿಸರ್ವ್ ಬ್ಯಾಂಕಿಗೆ ಹೊಸ ಗವರ್ನರ್ ನೇಮಕ ಆಗಿದ್ದಾರೆ. ಆತ ರಘುರಾಮ ಗೋವಿಂದ ರಾಜನ್. ಅಂತರರಾಷ್ಟ್ರೀಯ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಕಥೆ 'ಗೋವಿಂದ' ಆಗುತ್ತಿದೆ ಎಂದು ಎಲ್ಲರೂ ಭಯ ಪಡುತ್ತಿರುವಾಗಲೇ ಈ ಗೋವಿಂದ ರಾಜನ್ ಅಧಿಕಾರ ವಹಿಸಿಕೊಂಡು, ಭಾರತದ ಮಾನ ಕಾಪಾಡಿದ್ದಾರೆ. ವರ್ಷದ ಕೊನೆಯಲ್ಲಿ ಏಷ್ಯಾ ತೀವ್ರ ಆರ್ಥಿಕ ಹಿಂಜರಿತ ಎದುರಿಸಬೇಕಾಗುತ್ತದೆ ಎನ್ನುವ ಅರ್ಥತಜ್ಞರ ಎಚ್ಚರಿಕೆಯ ನಡುವೆಯೇ ಆರ್‌ಬಿಐ ಚುಕ್ಕಾಣಿ ಹಿಡಿದು ಈ ರಘುರಾಮ ಕೈಗೊಂಡ ಆರಂಭಿಕ ಕ್ರಮಗಳು ತಕ್ಷಣ ಫಲ ಕೊಟ್ಟಿವೆ.



ತಮಿಳ್ನಾಡು ಮೂಲದ ರಘುರಾಮ ರಾಜನ್ ಹುಟ್ಟಿ ಬೆಳೆದದ್ದು ಭೋಪಾಲದಲ್ಲಿ. (ಬರ್ತ್‌ಡೇ 3/2/1963) ಅದಕ್ಕೆ ಕಾರಣ ಅವರ ತಂದೆ ಕೇಂದ್ರ ಸರಕಾರದ ಹಿರಿಯ ಅಧಿಕಾರಿ ಆಗಿದ್ದುದು. ಐಐಟಿ ದೆಹಲಿಯಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿ ಪಡೆದು, ಐಐಎಮ್ ಅಹ್ಮದಾಬಾದ್‌ನಲ್ಲಿ ಎಂಬಿಎ ಮುಗಿಸಿದರು. ಮಸಾಚುಸೆಟ್ಸ್ (ಎಂಐಟಿ) ತಾಂತ್ರಿಕ ಸಂಸ್ಥೆಯಲ್ಲಿ ಪಿಎಚ್‌ಡಿ ಪಡೆದ ಬಳಿಕ ನೇರವಾಗಿ ಹಾರಿದ್ದು ಚಿಕಾಗೋದ ಬೂತ್ ಸ್ಕೂಲ್ ಆಫ್ ಬಿಸಿನೆಸ್‌ಗೆ. ಅಲ್ಲಿಂದೀಚೆಗೆ ಅವರದ್ದು ಚಿನ್ನದ ನಡೆಯೇ. 2003ರಿಂದ 2006ರವರೆಗೆ ಐಎಂಎಫ್‌ನ ಚೀಫ್ ಎಕನಾಮಿಸ್ಟ್ ಆಗಿದ್ದು ಒಂದು ದಾಖಲೆಯೇ. ಏಕೆಂದರೆ ಅಷ್ಟೊಂದು ಸಣ್ಣ ವಯಸ್ಸಿನಲ್ಲಿ ಜಗತ್ತಿನ ಯಾರೂ ಆ ದೊಡ್ಡ ಹುದ್ದೆ ವಹಿಸಿಕೊಂಡಿರಲಿಲ್ಲ. 2008ರಲ್ಲಿ ಜಾಗತಿಕ ಆರ್ಥಿಕ ಹಿಂಜರಿಕೆ ಆಗಲಿದೆ ಎಂದು ಈತ 2005ರಲ್ಲೇ ಭವಿಷ್ಯ ನುಡಿದಾಗ ಅಮೆರಿಕದ ಆರ್ಥಿಕ ತಜ್ಞರು ಗೇಲಿ ಮಾಡಿದ್ದರು. ಆ ಬಳಿಕ ರಾಜನ್ ಮಾತು ನಿಜವಾಯಿತು. ಸದ್ಯಕ್ಕೆ ವಿಶ್ವದ 10 ಅತ್ಯುತ್ತಮ ಆರ್ಥಿಕ ತಜ್ಞರಲ್ಲಿ ಒಬ್ಬರೆಂದು ಹೆಸರು ಪಡೆದಿರುವ ರಾಜನ್, ಐಐಎಂ ನಲ್ಲಿ ಸಹಪಾಠಿಯಾಗಿದ್ದ ರಾಧಿಕಾ ಪುರಿ ಅವರನ್ನೇ ಮದುವೆಯಾದರು. ಈ ಇಬ್ಬರು ಮಕ್ಕಳ ತಂದೆ, ಆರ್‌ಬಿಐ ನೀತಿ ನಿರ್ಣಯಗಳ ಮೂಲಕ ದೇಶದ ಆರ್ಥಿಕತೆಗೆ ಎಷ್ಟು ಶಕ್ತಿ ತುಂಬುತ್ತಾರೆ ಎನ್ನುವುದು ಕುತೂಹಲಕರ.



## ಜುಂಪಾ ದಿ ವಿನ್ನರ್?

ನೀಲಾಂಜನಾ ಸುದೇಷ್ಣಾ ಎಂದು ಕರೆದರೆ ಈಗ ಯಾರಿಗೂ ಈಕೆ ಯಾರೆಂದು ಗೊತ್ತಾಗುವುದಿಲ್ಲ. ಬಾಲ್ಯದಲ್ಲಿ ಇಟ್ಟಿದ್ದ ಜುಂಪಾ ಲಾಹಿರಿ ಎಂಬ ಅಡ್ಡ ಹೆಸರೇ ಖಾಯಂ ಆಗಿದೆ. ಭಾರತದಿಂದ ಲಂಡನ್ನಿಗೆ ವಲಸೆ ಹೋದ ಕೋಲ್ಕತ್ತಾದ ತಂದೆ-ತಾಯಿಗೆ ಲಂಡನ್ನಿನಲ್ಲಿ ಜನಿಸಿದ ಮಗು ಈಕೆ. ಹುಟ್ಟಿದ ಎರಡೇ ವರ್ಷದಲ್ಲಿ ಹೆತ್ತವರು ಅಲ್ಲಿಂದ ಅಮೆರಿಕಕ್ಕೆ ಗಂಟು ಮೂಟೆ ಕಟ್ಟಿದರು. ರೋಡ್ಸ್ ಐಲ್ಯಾಂಡ್ ವಿಶ್ವವಿದ್ಯಾನಿಲಯದಲ್ಲಿ ಗ್ರಂಥ-ಪಾಲಕರಾಗಿದ್ದ ತಂದೆ ಅಲ್ಲಿಯೇ ನೆಲೆಸಿದ್ದು ಮಗು ಜುಂಪಾ ಅಲ್ಲೇ ಬೆಳೆಯಲು ಕಾರಣವಾಯಿತು. ಹೀಗಾಗಿ ಈಕೆ ಇಂಡಿಯನ್/ ಅಮೆರಿಕನ್ ಲೇಖಕಿ. ಈ ಸಲದ 'ದಿ ಮ್ಯಾನ್ ಬೂಕರ್' ಪ್ರಶಸ್ತಿಗೆ ಆರು ಲೇಖಕರ ಕೃತಿಗಳನ್ನು ಅಂತಿಮಗೊಳಿಸಲಾಗಿದ್ದು, ಅದರಲ್ಲಿ ಜುಂಪಾ ಲಾಹಿರಿಯ 'ದಿ ಲೋ ಲ್ಯಾಂಡ್' ಎಂಬ ಕಾದಂಬರಿಯೂ ಸೇರಿರುವುದು ಈಗ ದೊಡ್ಡ ಸುದ್ದಿ. ಅಂತಿಮ ಆರರ ಪಟ್ಟಿಯಲ್ಲಿ ಈಗಾಗಲೆ ಎರಡು ಬಾರಿ ಬೂಕರ್ ಪ್ರಶಸ್ತಿ ಗೆದ್ದಿರುವ ಐರಿಶ್ ಲೇಖಕಿ ಕೋಮ್ ಟಾಯ್ಬಿನ್, ಕೆನಡಾದ ರೂಥ್ ಓಜೆಕಿ ಮತ್ತು ಇಂಗ್ಲೆಂಡಿನ ಜಿಮ್ ಕ್ರೇಸ್ ಕೂಡಾ ಇರುವುದರಿಂದ ಯಾರಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಒಲಿಯಲಿದೆ ಎನ್ನುವುದು ಕುತೂಹಲಕರ. ಅದೇನಿದ್ದರೂ 50 ಸಾವಿರ ಪೌಂಡ್ ಬಹುಮಾನದ ಪ್ರತಿಷ್ಠಿತ ಪ್ರಶಸ್ತಿಯ ಓಟದಲ್ಲಿ ಜುಂಪಾ ಸಾಕಷ್ಟು ಮುಂದಿದ್ದಾಳೆ ಎನ್ನುವುದೂ ನಿಜ.

ತನ್ನ ಮೊದಲ ಕಥಾ ಸಂಕಲನ 'ದಿ ಇಂಟರ್‌ಪ್ರೆಟರ್ ಆಫ್ ಮಲಾಡೀಸ್'ಗೆ 2000 ಇಸವಿಯಲ್ಲಿ ಪ್ರತಿಷ್ಠಿತ 'ಪುಲಿಟ್ಜರ್' ಪ್ರಶಸ್ತಿ ಪಡೆದ ಜುಂಪಾ (ಬರ್ತ್‌ಡೇ 11/7/1967) ಕೋಲ್ಕತ್ತಾದಲ್ಲಿರುವ ಹಿರಿಯರ ಮನೆಗೇ ಈಗಲೂ ಭೇಟಿ ನೀಡುವುದಿದೆ. ವೈಯಕ್ತಿಕವಾಗಿ ಬೌದ್ಧ ಧರ್ಮದ ಅನುಯಾಯಿ ಆಗಿರುವ ಜುಂಪಾ ಬರೆದ ಎರಡನೇ ಕೃತಿ 'ದಿ ನೇಮ್ ಸೇಕ್' ಎಂಬ ಕಾದಂಬರಿ ಅದೇ ಹೆಸರಿನಲ್ಲಿ ಸಿನಿಮಾ ಆಗಿ ಜನಪ್ರಿಯವಾಯಿತು. ಮತ್ತೊಂದು ಕಥಾ ಸಂಕಲನ 'ಅನ್‌ಎಕಸ್ಟಮ್ಡ್ ಅರ್ಥ್' ದಿ ನ್ಯೂಯಾರ್ಕ್ ಟೈಮ್ಸ್‌ನ ಬೆಸ್ಟ್ ಸೆಲ್ಲರ್ ಪಟ್ಟಿಯಲ್ಲಿತ್ತು. ಸಣ್ಣ ಕಥೆಗಾಗಿ ಪ್ರತಿಷ್ಠಿತ 'ಓ ಹೆನ್ರಿ' ಪ್ರಶಸ್ತಿಯನ್ನೂ ಗೆದ್ದಿರುವ ಜುಂಪಾ ಇಂಗ್ಲಿಷ್ ಮಾತ್ರವಲ್ಲ, ಸೃಜನಾತ್ಮಕ ಬರವಣಿಗೆ ಮತ್ತು ತುಲನಾತ್ಮಕ ಸಾಹಿತ್ಯದಲ್ಲೂ ಎಂ.ಎ ಪದವೀಧರೆ. ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾರ 'ಆರ್ಟ್ಸ್ ಆ್ಯಂಡ್ ಹ್ಯುಮಾನಿಟೀಸ್ ಕಮಿಟಿ'ಯ ಸದಸ್ಯರೂ ಆಗಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಂಸ್ಕೃತಿಕ ಸೋದರತೆ ಬೆಳೆಸುವ ನಿಟ್ಟಿನಲ್ಲಿ ಕ್ರಿಯಾಶೀಲರಾಗಿದ್ದಾರೆ. ಈಕೆ ಈ ವರ್ಷದ ಬೂಕರ್ ಪ್ರಶಸ್ತಿಯನ್ನು ಗೆದ್ದರೆ ಭಾರತೀಯರು ಹೆಮ್ಮೆ ಪಡಲು ಸಾಕಷ್ಟು ಕಾರಣಗಳಿವೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65